ದಿನಾಂಕಃ 04.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಆರೋಪಿ ಪರವಾಗಿ ಶ್ರೀ.ಆರ್.ಎಸ್., ವಕೀಲರಿಂದ

ಆರೋಪಿ ನನ್ನ ಸಂಬಂಧಿಕನಲ್ಲ. ಆದರೆ ಆತ ನಾನು ವಾಸವಿದ್ದ ಮನೆಯ ರಸ್ತೆಯಲ್ಲಿ ವಾಸವಿದ್ದ ಕಾರಣ ನೋಡಿ ಪರಿಚಯವಿರುತ್ತದೆ. ನನ್ನ ಮನೆಯಿಂದ ನನ್ನ ತಾಯಿ ಮತ್ತು ತಮ್ಮ ವಾಸವಿರುವ ಮನೆಯು ಸುಮಾರು 100 ಮೀಟರ್ ಅಂತರದಲ್ಲಿರುತ್ತದೆ. ನಾನು ವಾಸವಿದ್ದ ಮನೆಯಲ್ಲಿ ಲೀಸ್ ಗೆ ಪಡೆದುಕೊಂಡಿರುತ್ತೇನೆ. ಆರೋಪಿಯು ಆತನ ಸ್ವಂತ ಮನೆಯಲ್ಲಿ ವಾಸವಿದ್ದಾನೆ ಎಂದರೆ ಸರಿ.

2. ನಾನು ಪೇಟಿಂಗ್ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಿದ್ದೇನೆ. ನನ್ನ ಸ್ವಂತ ಹೆಸರಿನಲ್ಲಿ ಯಾವುದೇ ವ್ಯವಸಾಯದ ಜಮೀನು ಇಲ್ಲ, ಆದರೆ ನನ್ನ ತಂದೆಯ ಹೆಸರಿನಲ್ಲಿ ಇರುತ್ತದೆ. ಸದರಿ ಜಮೀನಿನ ಸರ್ವೆ ನಂ.173/1 ಆಗಿರುತ್ತದೆ. ಆರೋಪಿಗೆ ಸಂಬಂಧಿಸಿದ ಜಮೀನು ನನ್ನ ತಂದೆಯ ಜಮೀನು ಸರ್ವೆ ನಂ.173/1 ರ ಚಕ್ಕುಬಂದಿಯ ಸ್ಥಳದಲ್ಲಿ ಇರುವುದಿಲ್ಲ. ಆದರೆ ಆತನ ತಂದೆಗೆ ಸೇರಿದ ಜಮೀನು ಇದ್ದು ಅದನ್ನು ಈಗ ಆತನ ತಂದೆಯು ಅವರ ಮಗಳಿಗೆ ಮಾರಿರುತ್ತಾರೆ.

3. ಸರ್ವೆ ನಂ.173/1 ಕ್ಕೆ ಸಂಬಂಧಿಸಿ ನಾನು ಯಾವುದೇ ಸಿವಿಲ್ ವ್ಯಾಜ್ಯವನ್ನು ಹೂಡಿದ್ದು ಇರುವುದಿಲ್ಲ. ಸರ್ವೆ ನಂ.173/1 ಕ್ಕೆ ಸಂಬಂಧಿಸಿ ಆರೋಪಿತನು ಯಾವುದೇ ಸಿವಿಲ್ ವ್ಯಾಜ್ಯ ಮಾಡಿರುವುದಿಲ್ಲ. ಆದರೆ ಆತನ ಅಣ್ಣ ದಾಖಲಿಸಿರುತ್ತಾನೆ. ಸರ್ವೆ ನಂ.173/1 ಕ್ಕೆ ಸಂಬಂಧಿಸಿ ಆರೋಪಿಯು ಯಾವುದೇ ಸ್ವಾಧೀನತೆಯಲ್ಲಿರುವುದಿಲ್ಲ ಎಂದರೆ ಸರಿ. ನಾನು ನನ್ನ ದೂರಿನಲ್ಲಿ ಮತ್ತು ಹೇಳಿಕೆಯಲ್ಲಿ ಆರೋಪಿತನು ಸರ್ವೆ ನಂ.173/1 ರಲ್ಲಿ ಒಂದು ಎಕರೆ ಜಮೀನನ್ನು ಒತ್ತುವರಿ ಮಾಡಿದ್ದಾನೆ ಎಂದು ಹೇಳಿರುತ್ತೇನೆ ಎಂದರೆ ಸರಿ.

4. ಸರ್ವೆ ನಂ.173/1 ರ ಒಂದು ಎಕರೆ ಒತ್ತುವರಿ ಜಮೀನನ್ನು ನಾವು ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿ ಬಿಡಿಸಿಕೊಂಡಿರುತ್ತೇವೆ. ಸದರಿ ವಿಷಯವನ್ನು ತೋರಿಸುವ ಕುರಿತು ನಮ್ಮ ಬಳಿ ದಾಖಲೆಗಳು ಇರುತ್ತವೆ. ಸಾಕ್ಷಿಯು ಈ ಹಂತದಲ್ಲಿ ಪುನಃ ಮುಂದುವರೆದು ಸರ್ವೆ ನಂ.173/ಪಿ1 ಕ್ಕೆ ಸಂಬಂಧಿಸಿ ಯಾವುದೇ ಸಿವಿಲ್ ದಾವೆ ಹೂಡಿರುವುದಿಲ್ಲ ಬದಲಾಗಿ ಸರ್ವೆ ನಂ.4/13 ಪಿ1 ರ ಕುರಿತಾಗಿ ಸಿವಿಲ್ ದಾವೆ ಹೂಡಿರುವುದಾಗಿ ನುಡಿದಿರುತ್ತಾರೆ.

5. ಸರ್ವೆ ನಂ.4/13 ಪಿ1 ಕ್ಕೆ ಸಂಬಂಧಿಸಿ ನ್ಯಾಯಾಲಯವು ಆರೋಪಿಯ ಅಣ್ಣನಿಂದ ಒಂದು ಎಕರೆ ಜಮೀನನ್ನು ಬಿಡಿಸಿಕೊಳ್ಳಲು ನಮ್ಮ ಪರವಾಗಿ ಆದೇಶ ಮಾಡಿರುತ್ತದೆ. ತದ ನಂತರ ನ್ಯಾಯಾಲಯವು ನಮ್ಮ ಪರವಾಗಿ ಆದೇಶ ಮಾಡಿದ ಬಳಿಕ ನಾವು ನಮ್ಮ ಜಮೀನಿಗೆ ಉಳುಮೆ ಮಾಡಲು ಹೋದಾಗ 2019 ರಲ್ಲಿ ಆರೋಪಿಯು ನಮ್ಮ ಜೊತೆ ಜಗಳವಾಡಿರುತ್ತಾನೆ. ತದ ನಂತರ ಪೋಲೀಸ್ ಠಾಣೆಗೆ ನಾವು ದೂರು ಸಲ್ಲಿಸಿದ್ದು, ತದನಂತರ ನ್ಯಾಯಾಲಯದಿಂದ ಆದೇಶದ ಪ್ರತಿ ಬರುವವರೆಗೆ ಸುಮ್ಮನಿರಬೇಕೆಂದು ನಾವು ಸುಮ್ಮನಿದ್ದೆವು.

6. ತದನಂತರ ದಿಃ 15.05.2019 ರಂದು ನಾವು ನಮ್ಮ ಜಮೀನಿಗೆ ಉಳುಮೆ ಮಾಡಲು ಹೋದಾಗ ಅಲ್ಲಿ ಗಲಾಟೆಯಾಗಿರುತ್ತದೆ. ನಂತರ 2024 ರಲ್ಲಿ ನ್ಯಾಯಾಲಯದ ಆದೇಶ ಆದ ಬಳಿಕ ನಾವು ಸದರಿ ಜಮೀನಿನ ಸ್ವಾಧೀನತೆಯಲ್ಲಿರುತ್ತೇವೆ. ಆ ರೀತಿಯಾಗಿ ಯಾವ ಸರ್ವೆ ನಂಬರಿನ ಸ್ವಾಧೀನತೆಯಲ್ಲಿ ನೀವು ಇದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ಈಗ ದಾಖಲಾತಿಗಳನ್ನು ಪರಿಶೀಲಿಸಿದಾಗ ನಾವು ಸರ್ವೆ ನಂ.173/ಪಿ1 ರಲ್ಲಿ ಸ್ವಾದೀನತೆ ಪಡೆದಿದ್ದೇವೆ ಎಂದು ತಿಳಿದಿದ್ದೇವೆ ಎಂದು ನುಡಿದಿರುತ್ತಾರೆ.

7. ನಾವು ಆರೋಪಿಯ ಅಣ್ಣನ ಮೇಲೆ ಸಿವಿಲ್ ದಾವೆಯನ್ನು ದಾಖಲಿಸಿದ್ದನ್ನು ಹೊರತುಪಡಿಸಿ ಆರೋಪಿಯ ಮೇಲೆ ದಾವೆ ಹೂಡಿದ್ದು ಇರುವುದಿಲ್ಲ. ಆ ರೀತಿಯಾಗಿ 2019 ಲ್ಲಿ ನಾವು ಆರೋಪಿಯ ಅಣ್ಣನ

ಮೇಲೆ ಸಿವಿಲ್ ದಾವೆಯನ್ನು ಹೂಡಿದ್ದೆವು. ಸಾಕ್ಷಿಗೆ ಈಗ ಒಂದು ದೃಢೀಕೃತ ನಕಲನ್ನು ತೋರಿಸಿ ಸದರಿ ದೃಢೀಕೃತ ನಕಲಿನ ಅಡಿಯಲ್ಲಿ ಸಿವಿಲ್ ದಾವೆ ನಾವು ಹೂಡಿದ್ದೆವು ಎಂದು ಕೇಳಲಾಗಿದ್ದು ಸಾಕ್ಷಿಯು ಅದನ್ನು ನೋಡಿ ಸರಿ ಎಂದು ನುಡಿದಿರುತ್ತಾರೆ. ಸಾಕ್ಷಿಗೆ ತೋರಿಸಲಾದ ಸದರಿ ದೃಢೀಕೃತ ನಕಲು ಮೂಲ ದಾವೆ ನಂ.527/2019 ಆಗಿದ್ದು ಅದನ್ನು ನಿಡಿ.1 ಎಂದು ಗುರುತಿಸಲಾಯಿತು. ಸದರಿ ದಾವೆಯನ್ನು ಸರ್ವೆ ನಂ.4/13 ಪಿ1 ಕ್ಕೆ ಸಂಬಂಧಿಸಿ ಹೂಡಿದ್ದೆವು ಎಂದರೆ ಸರಿ. ಸದರಿ ದಾವೆಯಲ್ಲಿ ಸರ್ವೆ ನಂ.173/ಪಿ1 ಕ್ಕೆ ಸಂಬಂಧಿಸಿ ದಾವೆ ಮಾಡಲಾಗಿಲ್ಲ ಎಂದರೆ ಸಾಕ್ಷಿಯು ಸದರಿ ಸರ್ವೆ ನಂ.4/13 ಪಿ1 ರಿ-ಸರ್ವೆನಂಬರಾಗಿ ನಂ.173/ಪಿ1 ಆಗಿದ್ದು ಯಾವ ಇಸವಿಯಲ್ಲಿ ಆಗಿದೆ ಎಂದು ತನಗೆ ತಿಳಿದಿಲ್ಲ ಎಂದು ನುಡಿದಿರುತ್ತಾರೆ. ಸದರಿ ದಾವೆ ಈಗಲೂ ವಿಚಾರಣೆಯಲ್ಲಿ ಬಾಕಿ ಇದ್ದು ಈವರೆಗೂ ನಾವು ಸದರಿ ದಾವೆಯಲ್ಲಿ ಈ ರೀತಿ ಸರ್ವೆ ನಂಬರು ಬದಲಾದ ಕುರಿತು ಹೇಳಿಕೊಂಡಿಲ್ಲ ಎಂದರೆ ಸರಿ.

8. ಸದರಿ ಮೂಲ ದಾವೆಯಲ್ಲಿ ನಾವು ಸರ್ವೆ ನಂ.4/13 ಪಿ1 ಕ್ಕೆ ಸಂಬಂಧಿಸಿ ನಮ್ಮ ಸ್ವಾದೀನಕ್ಕೆ ತೊಂದರೆ ನೀಡಬಾರದು ಎಂದು ಕೋರಿ ದಾವೆ ಸಲ್ಲಿಸಿದ್ದೆವು ಎಂದರೆ ಸರಿ. ಸದರಿ ದಾವೆಯಲ್ಲಿ 2024 ರವರೆಗೆ ನಮಗೆ ಯಾವುದೇ ತಡೆಯಾಜ್ಞೆ ದೊರತಿದ್ದು ಇರುವುದಿಲ್ಲ ಎಂದರೆ ಸರಿ. ಅಸಲು ದಾವೆ ಸಂಖ್ಯೆ.527/2019 ರಲ್ಲಿ ಸರ್ವೆ ನಂ.173/ಪಿ1 ರಲ್ಲಿ ಆರೋಪಿತನ ಅಣ್ಣ ಒಂದು ಎಕರೆ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದಾನೆ ಎಂದು ತಿಳಿಸಿದ್ದು ಇರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆ ಸಮಯದಲ್ಲಿ ಆ ಕುರಿತು ತನಗೆ ತಿಳಿದಿರಲಿಲ್ಲ ಆದರೆ ತದನಂತರ ಪೋಲೀಸ್ ದೂರನ್ನು ಸಲ್ಲಿಸಿದ್ದೆವು ಎಂದು ನುಡಿಯುತ್ತಾರೆ.

9. ಸರ್ವೆ ನಂ.4/13 ಪಿ1 ಕ್ಕೆ ಸಂಬಂಧಿಸಿ ನಮಗೂ ಹಾಗೂ ಆರೋಪಿಯ ಅಣ್ಣನ ನಡುವೆ ತಕರಾರು ಇತ್ತು ಎಂದರೆ ಸರಿ. ಈ ಕುರಿತಾಗಿ

2019 ರಲ್ಲಿ ಅನೇಕ ಬಾರಿ ಪೋಲೀಸರಿಗೆ ದೂರು ಸಲ್ಲಿಸಲಾಗಿತ್ತು ಎಂದರೆ ಸರಿ. ಈ ಪ್ರಕರಣದ ದೂರನ್ನು ಸಲ್ಲಿಸುವಾಗ 2019 ರಲ್ಲಿ ನಮ್ಮ ಮತ್ತು ಆರೋಪಿಯ ಅಣ್ಣನ ನಡುವೆ ಇರುವ ಜಮೀನು ವ್ಯಾಜ್ಯದ ಕುರಿತು ಹಾಗೂ ಪೋಲೀಸರಿಗೆ ಸಲ್ಲಿಸಿದ ದೂರುಗಳ ಕುರಿತು ಹೇಳಿಕೊಂಡಿದ್ದೇನೆ. 2019 ರಲ್ಲಿ ಸುಮಾರು 5 ರಿಂದ 6 ಬಾರಿ ನಾನು ದೂರನ್ನು ಆರೋಪಿಯ ಅಣ್ಣನ ವಿರುದ್ದ ನೀಡಿರುತ್ತೇನೆ. ಆದರೆ ಸದರಿ ದೂರುಗಳನ್ನು ಪೋಲೀಸರು ಸ್ವೀಕರಿಸಿ ಪ್ರವವ ದಾಖಲಿಸಿದ್ದು ಇರುವುದಿಲ್ಲ. ಕಾರಣವೇನೆಂದರೆ ಪೋಲೀಸರು ಸಿವಿಲ್ ವ್ಯಾಜ್ಯ ಇರುವ ಕಾರಣ ನ್ಯಾಯಾಲಯದಲ್ಲಿ ನೋಡಿಕೊಳ್ಳಿ ಎಂದು ಹೇಳುತ್ತಿದ್ದರು.

10. ನನ್ನ ಮತ್ತು ನನ್ನ ತಮ್ಮನ ವಿರುದ್ದ ಆರೋಪಿಯ ಅಣ್ಣ ಕೂಡ ಒಂದು ಸಿವಿಲ್ ದಾವೆ ದಾಖಲಿಸಿದ್ದನು ಎಂದರೆ ಸರಿ. ಸದರಿ ದಾವೆಯ ದಾವಾ ನಕಲು ಹಾಗೂ ಪ್ರತಿವಾದಿಯ ಲಿಖಿತ ಹೇಳಿಕೆಯ ದೃಢೀಕೃತ ನಕಲನ್ನು ಸಾಕ್ಷಿಗೆ ತೋರಿಸಲಾಗಿದ್ದು ಸಾಕ್ಷಿಯು ಅವುಗಳನ್ನು ನೋಡಿ ಒಪ್ಪಿಕೊಂಡಿರುವ ಕಾರಣ ಅವುಗಳನ್ನು ಒಟ್ಟಾಗಿ ನಿಡಿ.2 ಎಂದು ಗುರುತಿಸಲಾಯಿತು. ಸದರಿ ನಿಡಿ.2 ರಲ್ಲಿ ನಾನೇ ನ್ಯಾಯಾಲಯಕ್ಕೆ ತಕರಾರು ಹೇಳಿಕೆ ಸಲ್ಲಿಸಿದ್ದೇನೆ ಎಂದರೆ ಸರಿ. ನಿಡಿ.2 ರ ಪ್ರಕಾರ ಕೂಡ ಆರೋಪಿಯ ಅಣ್ಣ ಸರ್ವೆ ನಂ.4/13 ಪಿ1 ಕ್ಕೆ ಸಂಬಂಧಿಸಿ ದಾಖಲಿಸಿರುತ್ತಾನೆ ಎಂದರೆ ಸರಿ.

11. 2024 ರವರೆಗೆ ಆರೋಪಿತನ ಅಣ್ಣನೇ ಸದರಿ ಸರ್ವೆ ನಂ.4/13 ಪಿ1 ರ ಸ್ವಾದೀನತೆಯಲ್ಲಿದ್ದ ಎಂದರೆ ಸರಿ. ಸದರಿ ದಿನ ನಾವು ನಮ್ಮ ಜಮೀನಿಗೆ ಉಳುಮೆ ಮಾಡಲು ಹೋಗುವ ಪೂರ್ವದಲ್ಲಿ ಪೋಲೀಸರಿಗೆ ಮಾಹಿತಿ ನೀಡಿ ಹೋಗಿದ್ದೆವು. ಆ ರೀತಿ ಮಾಹಿತಿ ನೀಡಿದ ಕುರಿತು ಪೋಲೀಸರು ನಮಗೆ ಹಿಂಬರಹ ನೀಡಿದ್ದರು. ಸದರಿ ಹಿಂಬರಹ ಈಗಲೂ ಕೂಡ ನನ್ನ ಬಳಿ ಇರುತ್ತದೆ. ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

12. ಈ ಪ್ರಕರಣವನ್ನು ದಾಖಲಿಸುವ ಸಮಯದಲ್ಲಿ ಕೋವಿಡ್-19 ಪಿಡುಗು ಇದ್ದ ಕಾರಣ ರಾಷ್ಟ್ರವ್ಯಾಪಿ ಲಾಕ್-ಡೌನ್ ಇದ್ದು ಜನಸಾಮಾನ್ಯರು ರಸ್ತೆಗಳಲ್ಲಿ ಓಡಾಡುತ್ತಿರಲಿಲ್ಲ ಎಂದರೆ ಸರಿ. ಆ ಸಮಯದಲ್ಲಿ ಸಾರ್ವಜನಿಕರಿಗೆ ಯಾವುದೇ ಮೂಲ ಸೌಕರ್ಯ ಕೂಡ ಸಿಗುತ್ತಿರಲಿಲ್ಲ ಎಂದರೆ ಸರಿ. ಎಲ್ಲರೂ ಕೂಡ ಅವರವರ ಮನೆಯಲ್ಲಿಯೇ ಇರಬೇಕಾಗಿತ್ತು ಎಂದರೆ ಸಾಕ್ಷಿಯು ಇರಬೇಕಾಗಿತ್ತು ಆದರೆ ಕೂಲಿ ಮಾಡುವವರು ಕೂಲಿ ಮಾಡುತ್ತಿದ್ದೆವು ಎಂದು ನುಡಿದಿರುತ್ತಾರೆ.

13. ಮೇಲೆ ಹೇಳಿದ ಎರಡು ಸರ್ವೆ ನಂಬರುಗಳ ಕುರಿತು ನಮಗೂ ಹಾಗೂ ಆರೋಪಿಯ ನಡುವೆ ಯಾವುದೇ ತಕರಾರು ಇರಲಿಲ್ಲ ಎಂದರೆ ಸಾಕ್ಷಿಯು ಈ ಪ್ರಕರಣದ ಘಟನೆ ಆಗುವವರೆಗೆ ಯಾವುದೇ ತಕರಾರು ಇರಲಿಲ್ಲ ಎಂದು ನುಡಿಯುತ್ತಾರೆ. ಈ ಪ್ರಕರಣದ ಘಟನೆ ಯಾವ ದಿನಾಂಕದಂದು ಆಗಿದೆ ಎಂಬ ಪ್ರಶ್ನೆಗೆ ಸಾಕ್ಷಿಯು ದಿಃ 14 ರ ಮೇ ದಂದು ನಾವು ಸ್ವಲ್ಪ ಮಟ್ಟಿಗೆ ಜಮೀನು ಉಳುಮೆ ಮಾಡಿ ಬಂದಿದ್ದು ತದನಂತರ ಮರುದಿನ ಪುನಃ ಉಳುಮೆ ಮಾಡಲು ಹೋದಾಗ ಆಯಿತು ಎಂದು ನುಡಿದಿರುತ್ತಾರೆ. ದಿಃ 14 ರ ಮೇ ದಂದು ಸಂಜೆ 6.00 ರಿಂದ 6.30 ರವರೆಗೆ ನಾವು ಜಮೀನು ಉಳುಮೆ ಮಾಡಿರುತ್ತೇವೆ.

14. ನಿಪಿ.1 ರ ದೂರಿನಲ್ಲಿ ನಾನು ದಿಃ 14.05.2020 ರಂದು ಸಂಜೆ 6.00 ರಿಂದ 6.30 ರವರೆಗೆ ಉಳುಮೆ ಮಾಡಿದ ಕುರಿತು ಹೇಳಿಕೊಂಡಿದ್ದು ಇರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ದಿಃ 14.05.2020 ರಂದು ಸಂಜೆ 6.00 ರಿಂದ 6.30 ರವರೆಗೆ ಉಳುಮೆ ಮಾಡಿದ ಕುರಿತು ಹೇಳಿರುವುದಿಲ್ಲ ಎಂದರೆ ಆ ವಿಚಾರ ಕೇಳದೇ ಇರುವ ಕಾರಣ ಹೇಳಿರಲಿಲ್ಲ ಎಂದು ನುಡಿಯುತ್ತಾರೆ. ದಿಃ 14.05.2020 ರಂದು ಸಂಜೆ 4.00 ರಿಂದ ಮದ್ಯರಾತ್ರಿ 12.30 ರವರೆಗೆ ನಾವು ಉಳುಮೆ ಮಾಡಿದ್ದೇವೆ ಎಂದರೆ ಸರಿ, ತದನಂತರ ಡೀಸೆಲ್ ಖಾಲಿಯಾದ ಕಾರಣ ಉಳುಮೆ ನಿಲ್ಲಿಸಿದ್ದೇವೆ ಎಂದರೆ ಸರಿ.

15. ಮರುದಿನ ಬೆಳಿಗ್ಗೆ ಉಳುಮೆ ಮಾಡಲು ನಾವು ಒಟ್ಟು ಆರು ಜನ ಸೇರಿಕೊಂಡು ಟ್ರಾಕ್ಟರ್ ಡ್ರೈವರ್ ನೊಂದಿಗೆ ಸ್ಥಳಕ್ಕೆ ಹೋಗಿರುತ್ತೇವೆ. ಆ ಸಮಯದಲ್ಲಿ ಪ್ರಾಸಾ.7 ರವರು ಕೂಡ ಇದ್ದರು ಎಂದರೆ ಸರಿ. ನಿಪಿ.4 ಮತ್ತು 5 ರಲ್ಲಿ ಕಾಣುವಂತೆ ಸ್ಥಳವು ಖಾಲಿ ಜಾಗ ಎಂದರೆ ಸರಿ. ಸದರಿ ಜಮೀನು ನೀರಾವರಿ ಜಮೀನು ಅಲ್ಲ ಎಂದರೆ ಸರಿ. ನಿಪಿ.4 ಮತ್ತು 5 ರಲ್ಲಿ ಕಾಣುವಂತೆ ಟ್ರಾಕ್ಟರಿನಲ್ಲಿ ಉಳುಮೆ ಮಾಡಿದಾಗ ಯಾವ ರೀತಿಯಾಗಿ ಮಣ್ಣಿನ ಹೆಂಟೆ ಬರುತ್ತದೆಯೋ ಆ ರೀತಿಯಾಗಿಯೇ ಕಾಣುತ್ತಿದೆ ಎಂದರೆ ಸರಿ. ದಿಃ 15.05.2020 ರಂದು ಬೆಳಿಗ್ಗೆ 9.30 ಗಂಟೆ ಸಮಯದಲ್ಲಿ ನಾವು ಬೇಸಾಯ ಮಾಡಲು ಅಲ್ಲಿಗೆ ಹೋಗಿದ್ದೆವು. 2020 ರ ಸಮಯದಲ್ಲಿ ನಾವು ಸದರಿ ಜಮೀನಿಗೆ ತಂತಿ ಬೇಲಿ ಹಾಕಿದ್ದು ಇರುವುದಿಲ್ಲ.

16. ಪ್ರಾಸಾ.2 ಮತ್ತು 7 ರವರು ಟ್ರಾಕ್ಟರ್ ಹೊಡೆಯುವ ಸಮಯದಲ್ಲಿ ನಾನು ಮತ್ತು ಉಳಿದವರು ನನ್ನ ಅಮ್ಮ ತಿಂಡಿ ತಂದ ಕಾರಣ ಬದುವಿನಲ್ಲಿ ಕುಳಿತುಕೊಂಡಿದ್ದೆವು. ಸದರಿ ದಿನ ಉಳುಮೆಯನ್ನು ಪೂರ್ವದಿಂದ ಪಶ್ಚಿಮದ ಕಡೆಗೆ ಉದ್ದವಾಗಿ ಉಳುಮೆ ಮಾಡುತ್ತಿದ್ದೆವು.

17. ದಿಃ 15.05.2020 ರಂದು ನಾನು ನನ್ನ ತಾಯಿ, ನನ್ನ ತಮ್ಮ, ನನ್ನ ಸೋದರತ್ತೆ ಹಾಗು ಟ್ರಾಕ್ಟರ್ ಚಾಲಕ ಪರಮೇಶ್ವರ್ ಸೇರಿಕೊಂಡು ಉಳುಮೆ ಮಾಡಿಸುತ್ತಿದ್ದೆವು ಎಂದು ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ಆ ಸಮಯದಲ್ಲಿ ಆರೋಪಿಯು ಅಲ್ಲಿಗೆ ಬಂದು ನನ್ನ ಅತ್ತೆಗೆ ಯಾಕೆ ಉಳುಮೆ ಮಾಡುತ್ತೀದ್ದೀಯ ಎಂದು ಹೇಳಿ ಕಪಾಳಕ್ಕೆ ಹೊಡೆದು ಅವಾಚ್ಯ ಶಬ್ದಗಳಿಂದ ಬೈದ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

18. ಅಲ್ಲದೇ ಆರೋಪಿಯು ಆ ಸಮಯದಲ್ಲಿ ದೊಣ್ಣೆಯಿಂದ ನನ್ನ ಅತ್ತೆಯ ಭುಜಕ್ಕೆ ಹಾಗೂ ಸೊಂಟದ ಕೆಳಭಾಗಕ್ಕೆ ಹೊಡೆದಿದ್ದು ಆಗ ಆಕೆಯು ಕೆಳಗೆ ಬಿದ್ದಾಗ ಆಕೆಯ ಬ್ಲೌಸ್ ಹಾಗೂ ಸೀರೆಯನ್ನು ಎಳೆದಾಡಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. ಅಲ್ಲದೇ ಆ ಸಮಯದಲ್ಲಿ ನಾನು ಜಗಳ ಬಿಡಿಸಲು ಹೋದಾಗ ನಿನ್ನನ್ನು ಬಿಡುವುದಿಲ್ಲ ಕೊಲೆ ಮಾಡುತ್ತೇನೆ ಎಂದು ಹೇಳಿ ಆರೋಪಿಯು ನನ್ನ ಎಡಕಣ್ಣಿನ ಹುಬ್ಬಿನ ಮೇಲೆ ಹೊಡೆದ, ಆ ಕಾರಣ ಅದು ಓಪನ್ ಆಗಿ ರಕ್ತ ಸುರಿಯಿತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲದೇ ಆ ಸಮಯದಲ್ಲಿ ನನ್ನ ತಾಯಿ ಬಿಡಿಸಲು ಬಂದಾಗ ಆರೋಪಿ ಆಕೆಯನ್ನು ತಳ್ಳಿದ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

19. ಅಲ್ಲದೇ ಆ ಸಮಯದಲ್ಲಿ ಪ್ರಾಸಾ.2 ರವರು ಜಗಳ ಬಿಡಿಸಲು ಬಂದಾಗ ಆರೋಪಿಯು ಆತನಿಗೆ ನಿನ್ನನ್ನು ಬಿಡುವುದಿಲ್ಲ ಕೊಲೆ ಮಾಡುತ್ತೇನೆ ಎಂದು ಹೇಳಿ ಅಡಿಕೆ ದಬ್ಬೆಯಿಂದ ಆತನ ತಲೆಯ ಹಿಂಭಾಗಕ್ಕೆ ಹೊಡೆದ ಆ ಕಾರಣ ತಲೆಯ ಹಿಂಬಾಗದಲ್ಲಿ ಓಪನ್ ಆಗಿ ರಕ್ತ ಬಂದು ಆತನ ಜ್ಞಾನ ತಪ್ಪಿತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲದೆ ಆ ಸಮಯದಲ್ಲಿ ಹೊಡೆತ ತಿಂದು ನನ್ನ ತಮ್ಮ ಮಕಾಡೆಯಾಗಿ ಬಿದ್ದಾಗ ಆರೋಪಿಯು ಅದೇ ಅಡಿಕೆ ದಬ್ಬೆಯಿಂದ ನನ್ನ ತಮ್ಮನ ಎಡಗೈ ಮೇಲೆ ಹಲ್ಲೆ ಮಾಡಿದ್ದು ಕಾರಣ ನನ್ನ ತಮ್ಮನ ಎಡಗೈ ಬೆಂಡಾಗಿ ಮುರಿದು ಹೋಯಿತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

20. ತದನಂತರ ಪ್ರಾಸಾ.7 ಹಾಗೂ ಪ್ರಾಸಾ.5 ರವರು ನನ್ನನ್ನು, ನನ್ನ ತಮ್ಮನನ್ನು ಹಾಗೂ ನನ್ನ ಅತ್ತೆಯನ್ನು ಬೀರೂರು ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿದ್ದು ಆಗ ನನ್ನ ತಾಯಿ ಕೂಡ ನಮ್ಮ ಜೊತೆ ಬಂದಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲದೇ ಆಗ ಆಸ್ಪತ್ರೆಯಲ್ಲಿ ನನ್ನನ್ನು ಮತ್ತು ನನ್ನ ತಮ್ಮ ಪ್ರಾಸಾ.2 ರವರನ್ನು ಎಮರ್ಜೆನ್ಸಿ ವಾರ್ಡಿಗೆ ದಾಖಲು ಮಾಡಿದ್ದರು ಹಾಗೂ ನನ್ನ ಅತ್ತೆಗೆ ಅಲ್ಲಿಯೇ ಹೊರಗಡೆ ಚಿಕಿತ್ಸೆ ನೀಡಿದ್ದರೂ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲದೇ ಆ ಸಮಯದಲ್ಲಿ

ನನ್ನ ತಾಯಿಗೆ ಯಾವುದೇ ಪೆಟ್ಟು ಆಗಿರಲಿಲ್ಲ ಆದರೆ ನನ್ನ ಎಡಗಣ್ಣಿನ ಹುಬ್ಬಿನ ಮೇಲೆ ಆದ ಗಾಯಕ್ಕೆ ಎರಡು ಹೊಲಿಗೆ ಹಾಕಿದ್ದರು, ಹಾಗೂ ನನ್ನ ತಮ್ಮನ ತಲೆಯ ಹಿಂಬಾಗದಲ್ಲಿ ಆಗಿರುವ ಗಾಯಕ್ಕೆ ಹೋಲಿಗೆ ಹಾಕಿ ನಂತರ ಶಿವಮೊಗ್ಗ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸುವಂತೆ ವೈದ್ಯರು ಸಲಹೆ ಮಾಡಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಆ ಪ್ರಕಾರ ನನ್ನ ತಮ್ಮನನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

21. ಬೀರೂರು ಆಸ್ಪತ್ರೆಯಲ್ಲಿ ಇರುವಾಗ ಪೋಲೀಸರಿಗೆ ಮಾಹಿತಿ ನೀಡಲಾಗಿದ್ದು ಓರ್ವ ಪೋಲೀಸ್ ಕಾನ್ಸಟೇಬಲ್ ಆಸ್ಪತ್ರೆಗೆ ಬಂದಿದ್ದರು. ನಿಪಿ.1 ರ ದೂರಿನಲ್ಲಿ ಬೀರೂರು ಆಸ್ಪತ್ರೆಗೆ ಓರ್ವ ಪೋಲೀಸ್ ಕಾನ್ಸಟೇಬಲ್ ಬಂದಿದ್ದರು ಎನ್ನುವ ವಿಚಾರ ನಾನು ಹೇಳಿ ಬರೆಯಿಸಿದ್ದು ಇರುವುದಿಲ್ಲ. ನಿಪಿ.1 ದೂರನ್ನು ನಾನು ಪೋಲೀಸರಿಗೆ ಹೇಳಿಕೆ ನೀಡಿದ ಪ್ರಕಾರ ಠಾಣೆಯಲ್ಲಿರುವ ಓರ್ವ ಪೋಲೀಸ್ ಕಾನ್ಸಟೇಬಲ್ ಅದನ್ನು ಬೆರಳಚ್ಚು ಮಾಡಿಕೊಂಡಿರುತ್ತಾರೆ. ಆ ರೀತಿ ಬೆರಳಚ್ಚು ಮಾಡಿಕೊಂಡ ಪೋಲೀಸರ ಹೆಸರು ಏನೆಂದು ನನಗೆ ಈಗ ಹೇಳಲು ಆಗುವುದಿಲ್ಲ. ನಿಪಿ.1 ದೂರನ್ನು ಸಲ್ಲಿಸುವಾಗ ಆಸ್ಪತ್ರೆಯಲ್ಲಿ ನನ್ನ ಹುಬ್ಬಿಗೆ ಹೊಲಿಗೆ ಹಾಕಿದ ಕುರಿತಾಗಿ ನೀಡಿದ ದಾಖಲೆಯನ್ನು ನಾನು ಪೋಲೀಸರಿಗೆ ನೀಡಿರುತ್ತೇನೆ.

22. ದಿಃ 14.05.2020 ರಂದು ಸಂಜೆ 4.00 ರಿಂದ ರಾತ್ರಿ 12.30 ರವರೆಗೆ ಸ್ಥಳದಲ್ಲಿ ನಾನು, ಪ್ರಾಸಾ.2, ಪ್ರಾಸಾ.5, 7 ಹಾಗೂ ಪ್ರಾಸಾ.4 ಇದ್ದೆವು. ನಾನು ಚಾಸಾ.8 ರವರ ಮನೆಯಲ್ಲಿ ಕೆಲಸ ಮಾಡಿದ ಕಾರಣ ನನಗೆ ಅವರ ಪರಿಚಯ ಇರುತ್ತದೆ. ಅದೇ ರೀತಿ ನನಗೆ ಚಾಸಾ.9 ರವರ ಪರಿಚಯವೂ ಕೂಡ ಅವರ ಮನೆಯಲ್ಲಿ ಕೆಲಸಕ್ಕೆ ಹೋದ ಕಾರಣ ಇರುತ್ತದೆ. ಚಾಸಾ.10 ನನ್ನ ದೂರದ ಸಂಬಂಧಿ ಹಾಗೂ ಚಾಸಾ.11 ರವರು ಚಾಸಾ.10 ರವರ ಸಂಬಂಧಿಕರಾಗಿರುತ್ತಾರೆ.

23. ನನ್ನ ತಮ್ಮನಿಗೆ ಆರೋಪಿತನು ಹಲ್ಲೆ ಮಾಡಿದ ಸಮಯದಲ್ಲಿ ಆತನ ಜ್ಞಾನ ತಪ್ಪಿದ್ದು ಇರುವುದಿಲ್ಲ. ಮು.ಮಾ.1 ಅದು ಒಂದು ಅಡಿಕೆ ದಬ್ಬೆಯೇ ಹೊರತು ದೊಣ್ಣೆ ಅಲ್ಲ ಎಂದರೆ ಸರಿ. ನಾನು ನಿಪಿ.1 ರಲ್ಲಿ ದೊಣ್ಣೆಯಿಂದ ಹೊಡೆದಿದ್ದಾನೆ ಎಂದು ಬರೆಸಿದ್ದೇನ ಎಂದರೆ ಸಾಕ್ಷಿಯು ಆ ಸಮಯದಲ್ಲಿ ಪೋಲೀಸರು ಅಡಿಕೆ ದಬ್ಬೆ ಎಂದು ಬರೆಯಲು ಸಾಧ್ಯವಿಲ್ಲ ಅದಕ್ಕಾಗಿ ದೊಣ್ಣೆ ಎಂದು ಬರೆದು ಬ್ರಾಕೆಟ್ ನಲ್ಲಿ ಅಡಿಕೆ ದಬ್ಬೆ ಎಂದು ಬರೆಯುತ್ತೇವೆ ಎಂದು ಹೇಳಿ ಬರೆದಿರುತ್ತಾರೆ ಎಂದು ನುಡಿದಿರುತ್ತಾರೆ.

24. ಮು.ಮಾ.1 ಅಡಿಕೆ ದಬ್ಬೆ ನಮ್ಮ ಜಮೀನಿನ ಬದಿಯ ಒಂದು ಪೊದೆಯ ಬಳಿ ಸ್ವಲ್ಪ ಕಾಣುವ ರೀತಿಯಲ್ಲಿ ಬಿದ್ದಿತ್ತು. ಆರೋಪಿಯು ಮು.ಮಾ.1 ರಿಂದ ನನಗೆ ಮತ್ತು ನನ್ನ ತಮ್ಮನಿಗೆ ಹಲ್ಲೆ ಮಾಡಿದ ಕಾರಣ ನಮಗೆ ರಕ್ತಗಾಯ ಆಗಿತ್ತು ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ್ದು ಸದರಿ ಮು.ಮಾ.1 ಕ್ಕೆ ರಕ್ತ ತಾಗಿತ್ತೆ ಎಂಬ ಪ್ರಶ್ನೆಗೆ ಸಾಕ್ಷಿಯು ರಕ್ತ ತಾಗಿತ್ತು ಎಂದು ನುಡಿಯುತ್ತಾರೆ. ಅದೇ ರೀತಿ ನನ್ನ ದೇಹದಿಂದ ಹಾಗೂ ನನ್ನ ತಮ್ಮನ ದೇಹದಿಂದ ಬಂದ ರಕ್ತವು ಸ್ವಲ್ಪ ಪ್ರಮಾಣದಲ್ಲಿ ಜಮೀನಿನ ಮೇಲೆ ಬಿದ್ದಿತ್ತು. ಮು.ಮಾ.1 ರ ಮೇಲೆ ಹಾಗೂ ಜಮೀನಿನ ಮೇಲೆ ರಕ್ತ ಬಿದ್ದಿರುವುದನ್ನು ಪೋಲೀಸರು ಪಂಚನಾಮೆಗೆ ಬಂದಾಗ ನಾನು ತೋರಿಸಿ ಆ ಕುರಿತು ಛಾಯಾಚಿತ್ರ ತೆಗೆಯಲಾಗಿರುತ್ತದೆ.

25. ಪ್ರಾಸಾ.8 ಮತ್ತು ಚಾಸಾ.9 ರವರನ್ನು ಘಟನಾ ಸ್ಥಳಕ್ಕೆ ನಾನೇ ಪೋಲೀಸರು ಕೇಳಿಕೊಂಡಂತೆ ಕರೆಸಿರುತ್ತೇನೆ. ಅದೇ ರೀತಿ ಚಾಸಾ.10 ಮತ್ತು 11 ರವರನ್ನು ಕೂಡ ನಾನೇ ಸ್ಥಳಕ್ಕೆ ಕರೆಸಿರುತ್ತೇನೆ. ನಾನು ನಿಪಿ.1 ಹಾಗೂ ಮುಖ್ಯ ವಿಚಾರಣೆಯಲ್ಲಿ ಹೇಳಿಕೊಂಡ ಪ್ರಕಾರ ಯಾವುದೇ ಘಟನೆ ನಡೆದಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಮ್ಮ ಆರೋಪಿಯ ಅಣ್ಣನಿಗೆ ತಿಳಿಯದಂತೆ ನಮ್ಮ ಸ್ವಾದೀನದಲ್ಲಿ ಆ ಜಮೀನು ಇಲ್ಲದೇ ಇದ್ದರೂ ಕೂಡ ರಾತ್ರಿ 12.30 ರವರೆಗೆ ಉಳುಮೆ ಮಾಡಿಸಿದ್ದೇವೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಉಳುಮೆ ಮಾಡುವಾಗ ನಾನು

ಮತ್ತು ನನ್ನ ತಮ್ಮ ಟ್ರಾಕ್ಟರ್ ನಿಂದ ಕೆಳಗೆ ಬಿದ್ದು ಗಾಯಪಡಿಸಿ ಕೊಂಡಿದ್ದೇವೆ ಎಂದರೆ ಸರಿಯಲ್ಲ. ತದನಂತರ ನಾವು ಆಸ್ಪತ್ರೆಗೆ ಹೋಗಿ ನಿಪಿ.1 ರ ರೀತಿಯ ಕತೆಯನ್ನು ಆರೋಪಿಯ ವಿರುದ್ದ ಕಟ್ಟಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಯು ನಮ್ಮ ಜಮೀನಿಗೆ ಬಂದು ನಮ್ಮನ್ನು ತಡೆದು ನಮಗೆ ಅವಾಚ್ಯ ಶಬ್ದಗಳಿಂದ ಬೈದು ಜೀವ ಬೆದರಿಕೆ ಹಾಕಿ ನಮ್ಮ ಅತ್ತೆಯ ಮಾನಕ್ಕೆ ಕುಂದು ಬರುವ ರೀತಿಯಲ್ಲಿ ವರ್ತಿಸಿ ಕೊಲೆ ಮಾಡುವ ಯತ್ನ ಮಾಡಿದ್ದಾನೆಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ನಮ್ಮ ಸ್ವಾದೀನದಲ್ಲಿ ಇಲ್ಲದೇ ಇರುವ ಜಮೀನನ್ನು ಉಳಮೆ ಮಾಡಿರುವ ವಿಚಾರ ಆರೋಪಿಯ ಅಣ್ಣನಿಗೆ ತಿಳಿದರೆ ಆತ ನಮ್ಮ ಮೇಲೆ ಪ್ರಕರಣ ದಾಖಲಿಸುತ್ತಾನೆ ಎಂದು ತಿಳಿದು ಟ್ರಾಕ್ಟರ್ ನಿಂದ ಬಿದ್ದಾಗ ಆದ ಗಾಯವನ್ನು ಉಪಯೋಗಿಸಿಕೊಂಡು ಆರೋಪಿಯ ವಿರುದ್ದ ಸುಳ್ಳು ದೂರು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಮು.ಮಾ.1 ಕ್ಕೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಾವು ಅಡಿಕೆ ಬೆಳೆಗಾರರಾಗಿರುವುದಿಲ್ಲ. ಮು.ಮಾ.1 ರ ರೀತಿಯ ಕಟ್ಟಿಗೆ ನಮ್ಮ ಜಮೀನಿನಲ್ಲಿ ಇದ್ದದ್ದು ಇರುವುದಿಲ್ಲ. ನಿಪಿ.4 ಮತ್ತು 5 ನ್ನು ಹಾಗೂ ಮು.ಮಾ.2 ಮತ್ತು 3 ನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

26. ನಾನು ಈ ಪ್ರಕರಣದಲ್ಲಿ ಒಟ್ಟಿಗೆ ಮೂರು ಬಾರಿ ಪೋಲೀಸ್ ಠಾಣೆಗೆ ಹೋಗಿರುತ್ತೇನೆ. ನಿಪಿ.3 ಮತ್ತು 6 ನ್ನು ನನ್ನ ಸಮಕ್ಷಮ ತಯಾರಿಸಿದ ದಾಖಲೆಗಳಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಗಳು ಈ ಪ್ರಕರಣಕ್ಕಾಗಿ ಸೃಷ್ಟಿಸಿದ ದಾಖಲೆಗಳು ಎಂದರೆ ಸರಿಯಲ್ಲ. ಆರೋಪಿಯನ್ನು ಈ ಪ್ರಕರಣದಲ್ಲಿ ಸಿಲುಕಿಸಿದರೆ ನಮ್ಮ ಜಮೀನಿನ ಮೇಲೆ ಆರೋಪಿಯ ಅಣ್ಣ ಯಾವುದೇ ಕ್ರಮ ಕೈಗೊಳ್ಳದೇ ಜಮೀನು ನಮಗೆ ಸುಲಭವಾಗಿ ದೊರೆಯಬಹುದು ಎಂದು ಆರೋಪಿಯ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಮು.ಮಾ.2 ಮತ್ತು 3

ನಮಗೆ ಸಂಬಂಧಿಸಿದ ಬಟ್ಟೆಗಳಲ್ಲ ಹಾಗೂ ಅದರ ಮೇಲಿರುವ ರಕ್ತ ನಮಗೆ ಸಂಬಂಧಿಸಿದ ರಕ್ತವಲ್ಲ ಎಂದರೆ ಸರಿಯಲ್ಲ. ನಾವು ಆರೋಪಿಗೆ ತೊಂದರೆಯಾಗಲಿ ಎಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಆರ್.ಎನ್.ಪ್ರವೀಣ್ ಕುಮಾರ್ )
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ